Sri D. B. PAWAR.—We are moving the Agricultural Re-Finanace Corporation to allot some funds for the purpose.

ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ ಹೇಳಿರುವಂತೆ 66-67ರಲ್ಲಿ ಆರು ಹಳ್ಳಿಗಳು, 67-68ರಲ್ಲಿ 12 ಹಳ್ಳಿಗಳು ಮತ್ತು 68-69ರಲ್ಲಿ 12 ಹಳ್ಳಿಗಳು ಎಂದು ಹೇಳಿದ್ದೀರಿ. ಇನ್ನೆಷ್ಟು ಹಳ್ಳಿಗಳಲ್ಲಿ ಇದೇ ಪ್ರಕಾರ ಸಾಯಿಲ್ ಕನ್‌ಸರ್‌ವೇಷನ್ ಕೆಲಸಗಳನ್ನು ಮಾಡಬೇಕೆಂದು ಇದ್ದೀರಿ ?

Sri D. B. PAWAR.—Actually these soil conservation schemes are taken up under section 37 (1) of the Land Improvement Act. All such cases will be considered by Government.

Sri D. B. KALMANKAR.—Has it come to the notice of the Government that some people, who have given consent to such soil conservation works being done by Government, have done it themselves and even then forcibly the department is putting the bunds ?

Sri D. B. PAWAR.—No such case is reported so far..

ಶ್ರೀ ವಿ. ಎನ್. ಪಾಟೀಲ್.—ಭೂಸಾರ ರಕ್ಷಣಾ ಕಾವಲುಗಾರಿಗಳನ್ನು ಯಾವ ಆಧಾರದ ಮೇಲೆ ತೆಗೆದುಕೊಳ್ಳುತ್ತೀರಿ ?

Sri D. B. PAWAR.—I have already answered that question. All these works are taken up under section 37(1) of the Mysore Land Improvement Act.

ಶ್ರೀ ವಿ. ಎನ್. ಪಾಟೀಲ್.—ಈಗ ನಾನು ಕೇಳಿದ್ದು ಸ್ಕಾಟಿಸ್ಟಿಕ್ ಪತಿಯಿಂದ ಏನಾದರೂ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎಂದು ಕೇಳಿದಾಗ ಮಾತ್ರ ತೆಗೆದುಕೊಳ್ಳುತ್ತೀರಾ ?

Sri D. B. PAWAR.—Usually when an area is declared as a scarcity area, to provide labour for the unemployed people and also to remove scarcity, these works are taken up.

ಶ್ರೀ ಜೆ. ಆರ್. ಹಾಲಸ್ವಾಮಿ.—ಚಿತ್ರದುರ್ಗ ಜಿಲ್ಲೆಯಲ್ಲಿ ಹಿಂದೆ ವಿಪರೀತ ಮಳೆ ಬಂದಾಗ ಒಡ್ಡುಗಳು ಒಡೆದುಹೋಗಿವೆ. ಅವುಗಳನ್ನು ಸರಿಮಾಡಿಸುವುದಕ್ಕೆ ಏನಾದರೂ ಏರ್ಪಾಡು ಮಾಡುತ್ತೀರಾ ?

Sri D. B. PAWAR.—It is for the Government to lay the bunds and the ryots are supposed to carry on the subsequent repairs.

ಶ್ರೀ ಜೆ. ಆರ್. ಹಾಲಸ್ವಾಮಿ.—ಒಡ್ಡನ್ನು ಹಾಕಿಸುವ ವಿಚಾರದಲ್ಲಿ ರೈತರಿಗೆ ಯಾವ ತಿಳಿವಳಿಕೆಯನ್ನು ಸಹ ಕೊಟ್ಟಿಲ್ಲ. ಒಡ್ಡನ್ನು ಹಾಕಿಸಬೇಕಾದರೆ ರೈತರು ಎಷ್ಟು ಹಣ ಕೊಡಬೇಕು ಎಂಬ ಬಗ್ಗೆ ತಿಳಿವಳಿಕೆ ಕೊಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ ?

Sri D. B. PAWAR.—It is an elaborate question.

Tank near Huliyapur in Kushtagi Taluk

9. Sri E. PUNDALEEKAPPA (Kushtagi).—

Will the Chief Minister be pleased to state :—

(*a*) the estimated cost of the tank to be constructed near Huliyapur in Kushtagi Taluk ;

(*b*) the extent of land that would be submerged under the said tank;

(*c*) the extent of land that will be irrigated by the said tank (Talukwise information may please be given);

(*d*) the compensation that has to be given to the lands that would be submerged;

(*e*) when the said construction work would be commenced ?

A.—Sri VEERENDRA PATIL (Chief Minister).—

(*a*) The project is under investigation.

(*b*) Does not arise in view of reply at (*a*).

(*c*) Does not arise in view of reply at (*a*).

(*d*) Does not arise in view of reply at (*a*).

(*e*) Does not arise in view of reply at (*a*).

ಶ್ರೀ ಐ. ಪುಂಡಲೀಕಪ್ಪ.—ಈ ಯೋಜನೆ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೀರಿ, ಪರಿಶೀಲನೆ ಯಾವಾಗ ಮುಗಿಯುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಇದು 1965 ರಲ್ಲಿ ಪರಿಶೀಲನೆಗೆ ಬಂದಿದೆ. ಈಗ ರಫ್ ಎಸ್ಟಿಮೇಟ್ ಮಾಡಿದ್ದಾರೆ, ಡೀಟೈಲ್ಡ್ ಎಸ್ಟಿಮೇಟ್ ಇನ್ನೂ ಮಾಡಿಲ್ಲ.

ಶ್ರೀ ಐ. ಪುಂಡಲೀಕಪ್ಪ.—ಕುಷ್ಟಗಿ ತಾಲ್ಲೂಕಿನಲ್ಲಿ ಯಾವ ನೀರಾವರಿ ಯೋಜನೆಯೂ ಇಲ್ಲದಿರುವುದರಿಂದ ಬಹಳ ಕಷ್ಟವಾಗಿದೆ. ಈ ಒಂದು ದೊಡ್ಡ ಕೆರೆಯನ್ನು ನಾಲ್ಕನೆಯ ಯೋಜನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಸರ್ಕಾರ ಮನಸ್ಸು ಮಾಡುತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್:—ಇದು ಚಿಕ್ಕ ನೀರಾವರಿ ಯೋಜನೆಯಲ್ಲಿ ಬರುವುದಿಲ್ಲ, ಮಧ್ಯಮ ನೀರಾವರಿ ಯೋಜನೆಯಲ್ಲಿ ಬರುತ್ತದೆ. ಈ ಯೋಜನೆಗೆ 21 ರಿಂದ 22 ಲಕ್ಷ ರೂಪಾಯಿಗಳು ಖರ್ಚು ಆಗಬಹುದೆಂದು ಸರಾಸರಿ ಅಂದಾಜು ಮಾಡಿದ್ದಾರೆ. ಯೋಜನೆಯ ಡೀಟೈಲ್ಡ್ ಎಸ್ಟಿಮೇಟ್ ತಯಾರುಮಾಡಿದ ಮೇಲೆ ತೆಗೆದುಕೊಳ್ಳಬಹುದು.

ಶ್ರೀ ಎ. ಆರ್. ಪಂಚೆಗಾವಿ.—ಈ ತಾಲ್ಲೂಕಿನಲ್ಲಿ ಪ್ರತಿವರ್ಷ ಬರಗಾಲ ಬರುತ್ತಿರುವುದರಿಂದ ಈ ವರ್ಷವೇ ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ವಿಚಾರ ಮಾಡುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಬರಗಾಲ ಪ್ರದೇಶಗಳು ಬಹಳ ಕಡೆ ಇವೆ. ರಾಜ್ಯದಲ್ಲಿ ಬೇಕಾದಷ್ಟು ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಯೋಜನೆಗಳನ್ನು ತೆಗೆದುಕೊಳ್ಳಬೇಕಾದಾಗ ಹಣದ ಮುಗ್ಗಟ್ಟು ಮತ್ತು ಇತರ ಪರಿಸ್ಥಿತಿಗಳನ್ನು ನೋಡಿಕೊಂಡು ತೆಗೆದುಕೊಳ್ಳಬೇಕಾಗುತ್ತದೆ. ಈ ಯೋಜನೆಯ ಬಗ್ಗೆ ಇನ್ನೂ ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರಾಗಿಲ್ಲ. ತಯಾರು ಮಾಡಿದ ಮೇಲೆ ಪರಿಶೀಲನೆ ಮಾಡಬೇಕಾಗುತ್ತದೆ.

1-30 P.M.

Moodabidri and Moolky as new taluk Headquarters

10. Sri K. RATNAKUMAR SHETTY (Mudabidri).—

Will the Minister for Revenue be pleased to state:—

(*a*) whether the Government have any proposal to make Moodabidri and Moolky as new Taluk Headquarters at least by the next year *i.e.*, 1969;

(*b*) if not, the reasons therefor ?